



ಅದೆಂದರೆ ಅವರ ಕುಟುಂಬದ ಎಲ್ಲರಿಗೂ ಟೀವಿಯ ಮುಂದೆ ಕುಳಿತೇ ಊಟ, ಕಾಫಿ, ಸಮಯ ಕಳೆಯುವುದು. ಎಲ್ಲವೂ ಟೀವಿ ಮುಂದೇ. ದಾಕ್ಷಿಣ್ಯಕ್ಕೆ ಕಟ್ಟು ಬಿದ್ದ ನಾವು ಸಹ ಅವರ ಜತೆ ಕುಳಿತು ಅವರು ನೋಡುವ ಧಾರಾವಾಹಿಗಳನ್ನು, ಕಾರ್ಯಕ್ರಮಗಳನ್ನು ಅನಿವಾರ್ಯವಾಗಿ ನೋಡುತ್ತಾ ಕಾಫಿ – ಕಷಾಯ ಕುಡಿಯುವುದು ಪ್ರಾರಂಭವಾಯಿತು.

ನಮ್ಮ ಕಣ್ಣು ಕಿವಿಗೆ ಹೊಂದಿಕೊಂಡಿದ್ದ ಹಿತವಾಗಿದ್ದ ದೂರದರ್ಶನದ ವಾರ್ತೆ ಕೈತಪ್ಪಿ ಕಿರುಚಾಡುವ 'ನಮ್ಮಲ್ಲಿ ಮಾತ್ರ' ಎಂಬ ಸುದ್ದಿಗಳು, ಏಕಕಾಲದಲ್ಲಿ ಎಂಟು ಹತ್ತು ಜನ ಕಿರುಚುವ ಪ್ಯಾನಲ್ ಡಿಸ್ಕಶನ್‌ಗಳು, ಒಂದು ನಿಮಿಷದಲ್ಲಿ ಮುಗಿಸಬಹುದಾದ ಸುದ್ದಿಯ ತುಣುಕೊಂದಕ್ಕೆ ಒಂದೂವರೆ ಗಂಟೆ ಹೇಳಿದ್ದೇ ಹೇಳಿ ವಿಶ್ಲೇಷಣೆ ನಡೆಸುವ ಅತಿ ಬುದ್ಧಿವಂತರ ಗಳಹುವಿಕೆ, ಪಕ್ಕದಲ್ಲಿ ಕೂತ ಹೌದಪ್ಪಗಳ ಗೋಣಾಡಿಸುವಿಕೆ, ನಿಮಗೆ ಕೆಮ್ಮು ಇದೆಯೇ. ನಿರ್ಲಕ್ಷ್ಯ ಬೇಡ... ಅದು ನಿಮ್ಮ ಮರಣಶಾಸನ ಬರೆಯಬಲ್ಲದು ಹುಷಾರ್... ಇಂಥ ಏನೆಲ್ಲ ಭಯೋತ್ಪಾದಕ ಹೇಳಿಕೆಗಳು! ನಮ್ಮ ತಲೆಯನ್ನು ಇನ್ನಿಲ್ಲದಂತೆ ಕೊರೆಯತೊಡಗಿದವು.

ಬಕೆಟ್‌ಗಟ್ಟಲೆ ಕಣ್ಣೀರು ಸುರಿಸುವ ದಡ್ಡ ನಾಯಕಿ, ಮಸಲತ್ತು ನಡೆಸುವುದೇ ಕೆಲಸವಾಗಿರುವ ಚಾಂದ್ರಾಣಿ ಖಳನಾಯಕಿ, ಗಂಭೀರ ಗೋಳುಕರೆ ಧಾರಾವಾಹಿಗಳು ಬೇಕೋ ನಕ್ಕು ನಗಿಸುವ ಹಾಸ್ಯದ ಕಾಮಿಡಿ ಷೋಗಳು ಬೇಕೋ ಎಂದು ಅವರವರಲ್ಲೇ